## ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ:** ಗೃಹ ಜ್ಯೋತಿ ಯೋಜನೆಯಡಿ ನೊಂದಣಿಗೊಳಿಸಿರುವ ಮಾಹಿತಿಯನ್ನು ಪರಿಶೀಲಿಸಲು ಹೆಚ್ಚುವರಿ ಮಾಹಿತಿಯನ್ನು ವಿದ್ಯುತ್ ಸರಬರಾಜು ಕಂಪನಿಗಳ ವತಿಯಿಂದ ಸಂಗ್ರಹಿಸಿ ಇಂಧೀಕರಿಸುವ / ದಾಖಲಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/154/ಪಿಎಸ್ಆರ್/2023 ದಿನಾಂಕ: 20.05.2023.
2. ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/164/ಪಿಎಸ್ಆರ್/2023 ದಿನಾಂಕ: 05.06.2023.
3. ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/164/ಪಿಎಸ್ಆರ್/2023 ದಿನಾಂಕ: 15.06.2023.
4. ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/208/ಪಿಎಸ್ಆರ್/2023 ದಿನಾಂಕ: 17.07.2023.
5. ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/164/ಪಿಎಸ್ಆರ್/2023 ದಿನಾಂಕ: 29.01.2024.
6. ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ಪತ್ರ ಸಂಖ್ಯೆ: ಮುಕಾ/12642192/2026 ದಿನಾಂಕ: 06.06.2026.

**ಪ್ರಸ್ತಾವನೆ**

1. ಕರ್ನಾಟಕ ರಾಜ್ಯದಲ್ಲಿ ಗೃಹ ಬಳಕೆ ವಿದ್ಯುಚ್ಛಕ್ತಿಯನ್ನು ಉಚಿತವಾಗಿ ಒದಗಿಸಲು ದಿನಾಂಕ: 20.05.2023 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಸರ್ಕಾರವು ತೀರ್ಮಾನಿಸಿ ಅನುಮೋದಿಸಿರುವಂತೆ "ಗೃಹ ಜ್ಯೋತಿ" ಯೋಜನೆಯನ್ನು ದಿನಾಂಕ: 01.07.2023 ರಿಂದ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಲಾಗಿರುತ್ತದೆ. ಮುಂದುವರೆದು, ದಿನಾಂಕ: 13.07.2023 ರಂದು ನಡೆದ ಸಂಪುಟ ಸಭೆಯ ನಡವಳಿಯಂತೆ ಭಾಗ್ಯಜ್ಯೋತಿ / ಕುಟೀರಜ್ಯೋತಿ ಮತ್ತು ಅಮೃತ ಜ್ಯೋತಿ ಸ್ಥಾವರಗಳನ್ನು ಗೃಹಜ್ಯೋತಿ ಯೋಜನೆಗೆ ಸೇರ್ಪಡೆಗೊಳಿಸಲಾಗಿರುತ್ತದೆ. ದಿನಾಂಕ: 18.01.2024 ರಂದು ನಡೆದ ಸಚಿವ ಸಂಪುಟ ಸಭೆಯ ತೀರ್ಮಾನದಂತೆ ಮಾಸಿಕ 48 ಯೂನಿಟ್‌ಗಳಿಗೂ ಕಡಿಮೆ ಬಳಸುತ್ತಿರುವ ಸ್ಥಾವರಗಳಿಗೆ ಶೇಕಡ 10 ರ ಬದಲಾಗಿ 10 ಯೂನಿಟ್‌ಗಳನ್ನು ಸೇರಿಸಿ ಮಾಸಿಕ ಅರ್ಹತಾ ಯೂನಿಟ್‌ಗಳನ್ನು ನಿಗಧಿಪಡಿಸಲು ಆದೇಶಿಸಲಾಗಿರುತ್ತದೆ.

2. ಗೃಹಜ್ಯೋತಿ ಯೋಜನೆಯಡಿ ರಾಜ್ಯದಲ್ಲಿನ ಪ್ರತಿ ಗೃಹ ಬಳಕೆ ವಿದ್ಯುತ್ ಸ್ಥಾವರಗಳಿಗೆ ಮಾಸಿಕ ಗರಿಷ್ಠ 200 ಯೂನಿಟ್‌ಗಳವರೆಗಿನ ಬಳಕೆಯ ಮಿತಿಯಲ್ಲಿ 2022-23 ರ ವಾರ್ಷಿಕ ಸರಾಸರಿ ಬಳಕೆಯನ್ನು ಪರಿಗಣಿಸಿ ಸದರಿ ಬಳಕೆಯ ಮೇಲೆ ಶೇ.10ರಷ್ಟು ಹೆಚ್ಚಿನ ಮಿತಿಯನ್ನು ಅನುಮತಿಸಿ ಮಾಸಿಕ ಅರ್ಹದಾಯಕ ಯೂನಿಟ್‌ಗಳನ್ನು ನಿಗಧಿಪಡಿಸಲಾಗಿರುತ್ತದೆ. ಸದರಿಯಂತೆ ನಿಗಧಿಪಡಿಸಲಾಗಿರುವ ಮಾಸಿಕ ಅರ್ಹದಾಯಕ ಯೂನಿಟ್‌ವರೆಗಿನ ಮಾಸಿಕ ಬಳಕೆಯ ವಿದ್ಯುತ್ ಬಿಲ್ಲನ್ನು ಸರ್ಕಾರದ ವತಿಯಿಂದ ಪಾವತಿಸುವ ಬಗ್ಗೆ ಹಾಗೂ ಮಾಸಿಕ ಬಳಕೆಯನ್ನು ಮೀರಿದ 200 ಯೂನಿಟ್‌ವರೆಗಿನ ಬಳಕೆಯ ವಿದ್ಯುತ್ ಬಿಲ್ಲನ್ನು ಗ್ರಾಹಕರು ಪಾವತಿಸುವ ಹಾಗೂ ಮಾಸಿಕ 200 ಯೂನಿಟ್‌ಗಳು ಮೀರಿದ ವಿದ್ಯುತ್ ಬಿಲ್ಲನ್ನು ಪೂರ್ಣವಾಗಿ ಗ್ರಾಹಕರು ಪಾವತಿಸಬೇಕಾಗಿರುತ್ತದೆ.

3. ಗೃಹ ಜ್ಯೋತಿ ಯೋಜನೆಯ ಸೌಲಭ್ಯವನ್ನು ಪಡೆಯಲು ಪ್ರಸ್ತುತ ಸೇವಾಸಿಂಧು ತಂತ್ರಾಂಶದಲ್ಲಿ ಈ ಕೆಳಕಂಡ ಮಾಹಿತಿಯೊಂದಿಗೆ ನೊಂದಣಿಗೊಳಿಸಲಾಗುತ್ತಿದೆ.

| | | |
|---|---|---|
| 1. | ವಿದ್ಯುತ್ ಸರಬರಾಜು ಕಂಪನಿ ಹೆಸರು | ESCOM Name. |
| 2. | ಖಾತೆ ಸಂಖ್ಯೆ / ಸಂಪರ್ಕ ಸಂಖ್ಯೆ | Account ID / Connection ID. |
| 3. | ವಿದ್ಯುತ್ ಸ್ಥಾವರದ ನೊಂದಾಯಿತ ಹೆಸರು | Account holder Name as in ESCOM. |
| 4. | ವಿದ್ಯುತ್ ಸ್ಥಾವರದ ವಿಳಾಸ | Account holder address as per ESCOM. |
| 5. | ಮಾಲೀಕ / ಬಾಡಿಗೆದಾರ | Type of Occupancy. |
| 6. | ಆಧಾರ್ ಸಂಖ್ಯೆ | Aadhar Number. |
| 7. | ಆಧಾರ್ ಕಾರ್ಡ್‌ನಲ್ಲಿನ ಹೆಸರು | Applicant Name as in Aadhar. |
| 8. | ಸಂಪರ್ಕ ಮೊಬೈಲ್ ಸಂಖ್ಯೆ | Mobile number for communication. |

4. ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 04.06.2026 ರಂದು ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳೊಂದಿಗೆ ನಡೆದ ಸಭೆಯಲ್ಲಿ ವಿವಿಧ ಇಲಾಖೆಗಳ ವತಿಯಿಂದ ಅನುಷ್ಠಾನಗೊಳಿಸಿರುವ ಗ್ಯಾರಂಟಿ ಯೋಜನೆಗಳ ಬಗ್ಗೆ ಚರ್ಚಿಸಲಾಗಿರುತ್ತದೆ. ಗೃಹಜ್ಯೋತಿ ಯೋಜನೆಯಡಿ ಸಹಾಯಧನವು ಗೃಹ ಬಳಕೆ ವಿದ್ಯುತ್ ಸ್ಥಾವರಗಳ ಕಂದಾಯ ಖಾತೆಗೆ ಜಮೆಗೊಳ್ಳುವ ಪ್ರಕ್ರಿಯೆ ಅನುಸರಿಸುತ್ತಿರುವ ಹಿನ್ನಲೆಯಲ್ಲಿ ಆಧಾರ ಸಂಖ್ಯೆಯೊಂದಿಗೆ ನೊಂದಣಿಗೊಳಿಸಿರುವ ಮಾಲೀಕರು ಹಾಗೂ ಬಾಡಿಗೆದಾರರು ಮೃತಪಟ್ಟಿರುವ, ಬಾಡಿಗೆದಾರರು ಮನೆ ಬದಲಾವಣೆಗೊಳಿಸಿರುವ, ಮನೆ ಖರೀದಿ, ಮಾರಾಟ ಮತ್ತು ಇತರೆ ಸಂದರ್ಭಗಳಲ್ಲಿ ನೊಂದಣಿದಾರ ಪ್ರಕರಣವಾರು ಪರಿಷ್ಕರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

5. ಈ ಮೇರೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ರವರ ಟಿಪ್ಪಣಿ ಸಂಖ್ಯೆ: ಮುಕಾ/12642192/2026 ದಿನಾಂಕ: 06.06.2026 ರಲ್ಲಿ ದಿನಾಂಕ: 04.06.2026 ರಂದು ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಗೃಹ ಜ್ಯೋತಿ ಯೋಜನೆಯ ಪ್ರಯೋಜನಗಳು ಜೀವಂತ ಫಲಾನುಭವಿಗಳಿಗೆ ಮಾತ್ರ ತಲುಪುವಂತೆ ಖಚಿತಪಡಿಸಿಕೊಳ್ಳಲು ಮಾನ್ಯ ಮುಖ್ಯ ಮಂತ್ರಿಯವರು ಸೂಚಿಸಿರುವ ಹಿನ್ನಲೆಯಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿರುತ್ತದೆ.

6. ಸದರಿ ಮೇರೆಗೆ ಗೃಹಜ್ಯೋತಿ ಯೋಜನೆಯ ಸೌಲಭ್ಯ ಪಡೆಯಲು ಪ್ರಸ್ತುತವಾಗಿ ಅಗತ್ಯವಾಗಿರುವ ಮಾಹಿತಿಗಳಾದ ಗೃಹಬಳಕೆ ಸ್ಥಾವರದ ಖಾತೆ ಸಂಖ್ಯೆ, ಆಧಾರ್ ಸಂಖ್ಯೆ, ಆಧಾರ್ ಕಾರ್ಡ್‌ನಲ್ಲಿನ ಹೆಸರು ಮತ್ತು ಸಂಪರ್ಕ ಮೊಬೈಲ್ ಸಂಖ್ಯೆ, ಮಾಲೀಕ ಮತ್ತು ಬಾಡಿಗೆದಾರರಾಗಿರುವ ಬಗ್ಗೆ ಮಾತ್ರ ನೊಂದಣಿಗೊಳಿಸಲಾಗುತ್ತಿದ್ದು, ಗೃಹ ಜ್ಯೋತಿ ಯೋಜನೆಯಡಿ ನೊಂದಣಿಗೊಳಿಸಿರುವ ಮಾಹಿತಿಯನ್ನು ಪರಿಶೀಲಿಸಲು ಈ ಕೆಳಕಂಡ ಹೆಚ್ಚುವರಿ ಮಾಹಿತಿಯನ್ನು ವಿದ್ಯುತ್ ಸರಬರಾಜು ಕಂಪನಿಯ ಸಿಬ್ಬಂದಿಯವರು ಪ್ರತಿ ಗೃಹಜ್ಯೋತಿ ಸ್ಥಾವರಕ್ಕೆ ಭೇಟಿ ನೀಡಿ ಮಾಲಿಕ / ಬಾಡಿಗೆದಾರರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೆಚ್ಚುವರಿ ಮಾಹಿತಿಯನ್ನು ಪಡೆದು ಸೇವಾಸಿಂಧು ತಂತ್ರಾಂಶದಲ್ಲಿ ಇಂಧೀಕರಿಸುವ / ದಾಖಲಿಸುವ ಬಗ್ಗೆ ನಿರ್ಧರಿಸಲಾಗಿರುತ್ತದೆ.

| | | |
|---|---|---|
| 1. | ಪಡಿತರ ಚೀಟಿ (ಎಪಿಎಲ್ / ಬಿಪಿಎಲ್ / ಯಾವುದು ಇಲ್ಲ). | Ration Card (APL / BPL / No Ration Card) |
| | ಬಿಪಿಎಲ್ ಹೌದಾದಲ್ಲಿ - ಬಿಪಿಎಲ್ ಕಾರ್ಡ್ ಸಂಖ್ಯೆ | If BPL-BPL Card No. |
| 2. | ಕರ್ನಾಟಕ ರಾಜ್ಯದ ನೊಂದಾಯಿತ ಮತದಾರರ ಬಗ್ಗೆ (ಹೌದು / ಇಲ್ಲ) | Registered Voter of Karnataka (Yes/No) |
| | ಕರ್ನಾಟಕ ಮತದಾರರಾದಲ್ಲಿ – EPIC ಸಂಖ್ಯೆ | If Yes – EPIC No. |
| 3. | ಅರ್ಜಿದಾರರ ಭಾವಚಿತ್ರ | Photo of the Applicant |
| 4. | ಅರ್ಜಿದಾರರ ಪ್ರವರ್ಗ (ಎಸ್‌ಸಿ / ಎಸ್‌ಟಿ / ಒಬಿಸಿ / ಅಲ್ಪಸಂಖ್ಯಾತ / ಇತರೆ) | Beneficiaries Category (SC / ST / OBC / Minorities / Others) |
| 5. | ಆದಾಯ ತೆರಿಗೆ ಪಾವತಿದಾರರೇ (ಹೌದು / ಇಲ್ಲ). | Income Tax Payer (Yes / No) |
| | ಆದಾಯ ತೆರಿಗೆ ಪಾವತಿದಾರರಾದಲ್ಲಿ – PAN ಸಂಖ್ಯೆ | If Yes – PAN No. |
| 6. | ವೃತ್ತಿ (ಸರ್ಕಾರಿ / ಖಾಸಗಿ / ವ್ಯಾಪರ / ಕೂಲಿ ಕಾರ್ಮಿಕ ಮತ್ತು ಇತ್ಯಾದಿ) | Profession (Government / Private / Business / Farmer / Labour & etc.) |

ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ/139/ಪಿಎಸ್‌ಆರ್/2026**
**ಬೆಂಗಳೂರು, ದಿನಾಂಕ: 30.06.2026**

1. ಗೃಹ ಜ್ಯೋತಿ ಯೋಜನೆಗೆ ಈಗಾಗಲೇ ನೊಂದಣಿಗೊಳಿಸಿರುವ ಸ್ಥಾವರಗಳಿಗೆ ಸಂಬಂಧಿಸಿದಂತೆ ವಿದ್ಯುತ್ ಸರಬರಾಜು ಕಂಪನಿಗಳ ಸಿಬ್ಬಂದಿ (ಮಾಪಕ ಓದುಗ / ಇತರೆ ಸಿಬ್ಬಂದಿ) ಯವರು ಸದರಿ ಗೃಹಜ್ಯೋತಿ ಸ್ಥಾವರಗಳಿಗೆ ಭೇಟಿ ನೀಡಿ ಮಾಲಿಕ / ಬಾಡಿಗೆದಾರರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೆಚ್ಚುವರಿ ಮಾಹಿತಿಯ ಅಗತ್ಯ ದಾಖಲಾತಿಗಳನ್ನು ಪಡೆದು ಸೇವಾಸಿಂಧು ತಂತ್ರಾಂಶದಲ್ಲಿ ಇಂಧೀಕರಿಸುವುದು.

| | | |
|---|---|---|
| 1. | ಪಡಿತರ ಚೀಟಿ<br>(ಎಪಿಎಲ್ / ಬಿಪಿಎಲ್ / ಯಾವುದು ಇಲ್ಲ). | Ration Card<br>(APL / BPL / No Ration Card) |
| | ಬಿಪಿಎಲ್ ಹೌದಾದಲ್ಲಿ - ಬಿಪಿಎಲ್ ಕಾರ್ಡ್ ಸಂಖ್ಯೆ | If BPL-BPL Card No. |
| 2. | ಕರ್ನಾಟಕ ರಾಜ್ಯದ ನೊಂದಾಯಿತ ಮತದಾರರ ಬಗ್ಗೆ (ಹೌದು / ಇಲ್ಲ) | Registered Voter of Karnataka (Yes/No) |
| | ಕರ್ನಾಟಕ ಮತದಾರರಾದಲ್ಲಿ – EPIC ಸಂಖ್ಯೆ | If Yes – EPIC No. |
| 3. | ಅರ್ಜಿದಾರರ ಭಾವಚಿತ್ರ | Photo of the Applicant |
| 4. | ಅರ್ಜಿದಾರರ ಪ್ರವರ್ಗ (ಎಸ್‌ಸಿ / ಎಸ್‌ಟಿ / ಒಬಿಸಿ / ಅಲ್ಪಸಂಖ್ಯಾತ / ಇತರೆ) | Beneficiaries Category (SC / ST / OBC / Minorities / Others) |
| 5. | ಆದಾಯ ತೆರಿಗೆ ಪಾವತಿದಾರರೇ (ಹೌದು / ಇಲ್ಲ). | Income Tax Payer (Yes / No) |
| | ಆದಾಯ ತೆರಿಗೆ ಪಾವತಿದಾರರಾದಲ್ಲಿ – PAN ಸಂಖ್ಯೆ | If Yes – PAN No. |
| 6. | ವೃತ್ತಿ (ಸರ್ಕಾರಿ / ಖಾಸಗಿ / ವ್ಯಾಪರ / ಕೂಲಿ ಕಾರ್ಮಿಕ ಮತ್ತು ಇತ್ಯಾದಿ) | Profession (Government / Private / Business / Farmer / Labour & etc.) |

2. ಗೃಹಜ್ಯೋತಿ ಸ್ಥಾವರದ ಮಾಲೀಕ / ಬಾಡಿಗೆದಾರರು ಹೆಚ್ಚುವರಿ ಮಾಹಿತಿ ನೀಡಿರುವ ಬಗ್ಗೆ ಮಾಲೀಕ / ಬಾಡಿಗೆದಾರರಿಂದ ದೃಢೀಕರಣ ಪಡೆಯುವುದು.

3. ಗೃಹಜ್ಯೋತಿ ಸ್ಥಾವರಗಳ ಹೆಚ್ಚುವರಿ ಮಾಹಿತಿ ಸಂಗ್ರಹಣೆ ಕಾರ್ಯವನ್ನು ದಿನಾಂಕ: 01.07.2026 ರಿಂದ ಜಾರಿಗೆ ಬರುವಂತೆ ಕೈಗೆತ್ತಿಕೊಳ್ಳುವುದು. ಸದರಿ ಪ್ರಕ್ರಿಯೆಯನ್ನು ಎರಡು ತಿಂಗಳೊಳಗಾಗಿ ಪೂರ್ಣಗೊಳಿಸುವುದು.

4. ಮೇಲಿನ ಪ್ರಕ್ರಿಯೆಗೆ ಅಗತ್ಯವಾಗಿರುವ ಗೌರವಧನ ಮತ್ತು Internet Data Charges ಒಳಗೊಂಡಂತೆ ಇತರೆ ವೆಚ್ಚಗಳನ್ನು ಪಾವತಿಸುವ ಬಗ್ಗೆ ಕಂಪನಿಗಳ ಮಟ್ಟದಲ್ಲಿ ನಿರ್ಧಾರ ಕೈಗೊಳ್ಳುವುದು.

5. ವಿದ್ಯುತ್ ಸರಬರಾಜು ಕಂಪನಿಗಳು ಗೃಹಜ್ಯೋತಿ ಯೋಜನೆಯ ಹೆಚ್ಚುವರಿ ಮಾಹಿತಿಯನ್ನು ಪಡೆದು ಇಂಧೀಕರಿಸುವ / ದಾಖಲಿಸಿರುವ ದೈನಂದಿನ ಪ್ರಗತಿಯ ಮಾಹಿತಿಯನ್ನು ಸರ್ಕಾರಕ್ಕೆ ನೀಡುವುದು.

ಉಳಿದಂತೆ ಗೃಹಜ್ಯೋತಿ ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ಸರ್ಕಾರದಿಂದ ಹೊರಡಿಸಿರುವ ಎಲ್ಲಾ ಆದೇಶ / ಸುತ್ತೋಲೆಗಳಲ್ಲಿನ ಅಂಶಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

**(ಶಾಂತಾರಾಮ)**
**ಸರ್ಕಾರದ ಅಧೀನ ಕಾರ್ಯದರ್ಶಿ**
**ಇಂಧನ ಇಲಾಖೆ.**

**ಇವರಿಗೆ:**

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಇವರಿಗೆ ಪ್ರಕಟಣೆಗಾಗಿ.

**ಪ್ರತಿಗಳು:**

1. ಮಹಾಲೇಖಪಾಲರು (ಎ&ಇ) / (ಲೆಕ್ಕಪರಿಶೋಧನೆ-1 & ಲೆಕ್ಕಪರಿಶೋಧನೆ-2) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ಮಾನ್ಯ ಮುಖ್ಯ ಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಸಿ.ಆ.ಸು.ಇ (ಇ-ಆಡಳಿತ), ಕೊಠಡಿ ಸಂಖ್ಯೆ: 106, 2ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.

8. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ / ಕವಿನಿನಿ / ಬೆವಿಕಂ / ಮವಿಕಂ / ಹುವಿಕಂ / ಗುವಿಕಂ / ಚಾವಿಸನಿನಿ / ಹುಕ್ಕೇರಿ.
9. ಮಾನ್ಯ ಉಪ ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
10. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-1), ವಿಧಾನ ಸೌಧ, ಬೆಂಗಳೂರು.
12. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
13. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
14. ಸರ್ಕಾರದ ಅಧೀನ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
15. ಶಾಖೆಯ ರಕ್ಷಾ ಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.